# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

ಕ್ರಮಾಂಕ/No:ಮಂವಿ/ಸಿಡಿಸಿ/ಎಎಫ್ಎಫ್/ಸಿಆರ್-1/2023-24/ಎ1

ಕುಲಸಚಿವರಕಚೇರಿ
ಮಂಗಳಗಂಗೋತ್ರಿ– 574 199
Office of the Registrar
Mangalagangothri – 574 199

ದಿನಾಂಕ/Date: 25.04.2023

**ಅಧಿಸೂಚನೆ**

ವಿಷಯ: ಶೈಕ್ಷಣಿಕ ವರ್ಷ 2023-24ನೇ ಸಾಲಿಗೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೊಸ ಕಾಲೇಜುಗಳ ಸಂಯೋಜನೆ, ಸಂಯೋಜಿತ ಕಾಲೇಜುಗಳಿಗೆ ಹೊಸ ವ್ಯಾಸಂಗ ಕ್ರಮ ಮತ್ತು ಹೊಸ ವಿಷಯಗಳು/ಮುಂದುವರಿಕೆ/ವಿಸ್ತರಣಾ ಸಂಯೋಜನೆ/ಶಾಶ್ವತ ಸಂಯೋಜನೆ/ವಿದ್ಯಾರ್ಥಿ ಪ್ರಮಾಣ ಹೆಚ್ಚಳ/ಕಾಲೇಜಿನ ಹೆಸರು ಬದಲಾವಣೆ/ಮ್ಯಾನೇಜ್‌ಮೆಂಟ್ ಬದಲಾವಣೆ, ಇತ್ಯಾದಿಗಳ ಬಗ್ಗೆ ಅರ್ಜಿ ಆಹ್ವಾನ.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 59(3) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಯೋಜನೆಗೆ ಒಳಪಟ್ಟ ಎಲ್ಲಾ ಕಾಲೇಜು/ವಿದ್ಯಾಸಂಸ್ಥೆಗಳಿಂದ ಶೈಕ್ಷಣಿಕ ವರ್ಷ 2023-24ನೇ ಸಾಲಿಗೆ Opening new colleges, Extension of existing affiliation, continuation of affiliation, permanent affiliation, Change/Addition of subject, division of faculty, Increase of intake, Change of college name, Change of place, Closure and withdrawal of a College, Transfer of management ಬಗ್ಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಎಲ್ಲಾ ಕಾಲೇಜುಗಳು/ಆಸಕ್ತ ವಿದ್ಯಾಸಂಸ್ಥೆಗಳು UUCMS portal (https://uucms.karnataka.gov.in) ನಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ರೂ.2,000/- (ರೂಪಾಯಿ ಎರಡು ಸಾವಿರ ಮಾತ್ರ) ಅರ್ಜಿ ಶುಲ್ಕ ಹಾಗೂ ನಿಗದಿತ ಸಂಯೋಜನಾ ಶುಲ್ಕವನ್ನು UUCMS Portal ನಲ್ಲಿ ಆನ್‌ಲೈನ್ ಮುಖಾಂತರ ಪಾವತಿಸಿ, ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಈ ಕೆಳಕಂಡ ದಿನಾಂಕಗಳ ಒಳಗಾಗಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

| | | |
|---|---|---|
| 1. | **ದಂಡ ಶುಲ್ಕ ರಹಿತ ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | **06.05.2023** |
| 2. | **ರೂ.10,000/- ದಂಡ ಶುಲ್ಕದೊಂದಿಗೆ ಆನ್‌ಲೈನ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | **10.05.2023** |
| 3. | **ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳೊಂದಿಗೆ ದಿನಾಂಕ 10.05.2023 ರೊಳಗೆ ಈ ಕಚೇರಿಗೆ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.** | |

ಶುಲ್ಕ ಪಾವತಿಯ ಬಗ್ಗೆ ಮಾಹಿತಿಗಳನ್ನು ಲಗತ್ತಿಸಲಾಗಿದೆ. ಈ ಕುರಿತು ಅಗತ್ಯವಿದ್ದಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿ ಕಚೇರಿಯಿಂದ ಅಥವಾ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ (www.mangaloreuniversity.ac.in) ಪಡೆದುಕೊಳ್ಳಬಹುದಾಗಿದೆ.

**ಅರ್ಜಿ ಸಲ್ಲಿಸುವಾಗ ಸಂಸ್ಥೆಗಳು ಈ ಕೆಳಗಿನ ಅಂಶಗಳನ್ನು ಗಮನಿಸತಕ್ಕದ್ದು:**

1. ಈಗಾಗಲೇ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳು ಖಾಯಂ ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ ಮುಂದುವರಿಕೆ ಸಂಯೋಜನೆಗೂ ಅರ್ಜಿ ಸಲ್ಲಿಸತಕ್ಕದ್ದು. ಅಲ್ಲದೇ, ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸ

ಬಯಸುವ ವಿದ್ಯಾಸಂಸ್ಥೆಗಳು/ಕಾಲೇಜುಗಳು ಕಡ್ಡಾಯವಾಗಿ ಕನಿಷ್ಟ ಸಿ++ ಗ್ರೇಡ್ ನ್ಯಾಕ್ ಅಕ್ರೆಡಿಟೇಶನ್ ಹೊಂದಿರತಕ್ಕದ್ದು.

2. ಶಾಶ್ವತ ಸಂಯೋಜನೆ ಹೊಂದಿರುವ ಅಥವಾ ಎರಡು ವರ್ಷಗಳವರೆಗೆ ಸತತವಾಗಿ ಮುಂದುವರಿಕೆ ಸಂಯೋಜನೆ ಹೊಂದಿರುವ ಶಿಕ್ಷಣ ಸಂಸ್ಥೆಗಳು ಮಾತ್ರ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ಆರಂಭಿಸಲು ಅರ್ಹವಾಗಿರುತ್ತವೆ.
3. ಹೊಸದಾಗಿ ಬಿ.ಹೆಚ್.ಎಂ./ಎಂ.ಬಿ.ಎ./ಎಂ.ಸಿ.ಎ. ಕಾರ್ಯಕ್ರಮಗಳನ್ನು ಪ್ರಾರಂಭಿಸುವ ವಿದ್ಯಾಸಂಸ್ಥೆಗಳು AICTE (All India Council for Technical Education) ಹಾಗೂ ಬಿ.ಎಡ್./ಬಿ.ಪಿ.ಎಡ್./ಎಂ.ಎಡ್/ಎಂ.ಪಿ.ಎಡ್. ಕಾರ್ಯಕ್ರಮಗಳನ್ನು ಪ್ರಾರಂಭಿಸುವ ವಿದ್ಯಾಸಂಸ್ಥೆಗಳು NCTE (National Council for Teacher Education) ಮತ್ತು ಎಂ.ಎಎಸ್ಎಲ್‌ಪಿ/ಬಿ.ಎಎಸ್ಎಲ್‌ಪಿ/ಎಂ.ಎಸ್ಸಿ.(ಆಡಿಯೋಲಾಜಿ)/ ಎಂ.ಎಸ್ಸಿ.(ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಜಿ) ಕಾರ್ಯಕ್ರಮಗಳನ್ನು ಪ್ರಾರಂಭಿಸುವ ವಿದ್ಯಾಸಂಸ್ಥೆಗಳು RCI (Rehabilitation Council of India) ಮಾನ್ಯತೆ ಪಡೆಯತಕ್ಕದ್ದು.
4. ಮಂಗಳೂರು ವಿಶ್ವವಿದ್ಯಾನಿಲಯದಿಂದ ಅಧಿಕೃತವಾಗಿ ಅಧಿಸೂಚಿಸಲ್ಪಟ್ಟ ಕಾರ್ಯಕ್ರಮಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
5. "ಅಲ್ಪ ಸಂಖ್ಯಾತ ವರ್ಗದ ಸಂಸ್ಥೆ" ಎಂದು ಪರಿಗಣಿಸಬೇಕಾದರೆ ಸರ್ಕಾರಿ ಆದೇಶದ ದೃಢೀಕೃತ ಪ್ರತಿಯನ್ನು ಕಡ್ಡಾಯವಾಗಿ ಅರ್ಜಿ ಜೊತೆಗೆ ಲಗತ್ತಿಸತಕ್ಕದ್ದು,
6. ಬೋಧಕ ಸಿಬ್ಬಂದಿಗಳ ನೇಮಕಾತಿ ಮತ್ತು ಇತರ ವಿಷಯಗಳ ಬಗ್ಗೆ ಯುಜಿಸಿ/ರಾಜ್ಯ ಸರ್ಕಾರ/ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.
7. ವಿನಿಯಮದ ಪ್ರಕಾರ ವಿದ್ಯಾರ್ಥಿಗಳಿಗೆ ಭಾಷಾ ವಿಷಯವನ್ನು ಖಾಸಗಿಯಾಗಿ ವ್ಯಾಸಂಗ ಮಾಡಲು ಮತ್ತು ಸಂಯೋಜನೆ ಹೊಂದಿರದ ಭಾಷಾ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ, ಸಂಯೋಜಿತ ಕಾಲೇಜುಗಳ ಸಂಯೋಜನೆ ಹೊಂದಿರದ ಭಾಷಾ ವಿಷಯಗಳನ್ನು ಬೋಧಿಸಲು ಇಚ್ಛಿಸಿದಲ್ಲಿ, ಅಂತಹ ವಿಷಯಗಳಿಗೆ ಪ್ರತ್ಯೇಕ ಸಂಯೋಜನೆಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
8. ಹೊಸದಾಗಿ ಮಹಿಳಾ ಕಾಲೇಜಿನ ಸಂಯೋಜನೆಗೆ ಅರ್ಜಿ ಸಲ್ಲಿಸುವ ಸಂಸ್ಥೆಯು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.
9. ಕೊಡಗು ಜಿಲ್ಲೆಯಲ್ಲಿ ಕಾಲೇಜನ್ನು ಪ್ರಾರಂಭಿಸಲು ಇಚ್ಛಿಸುವ ವಿದ್ಯಾಸಂಸ್ಥೆಗಳು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ.
10. ಸಂಯೋಜನೆಗೆ ಅರ್ಜಿ ಸಲ್ಲಿಸುವ ವಿದ್ಯಾಸಂಸ್ಥೆಗಳು GST ಪಾವತಿ ಮಾಡುವ ಬಗ್ಗೆ ರೂ.200/-ರ Indemnity bond ನ್ನು ನೋಟರಿಯಿಂದ ದೃಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು. (Indemnity bond format ನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು)
11. ಹೊಸ ಕಾಲೇಜುಗಳು/ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ತಮ್ಮ ಜಮೀನಿನ ಕುರಿತು ಕರ್ನಾಟಕ ರಾಜ್ಯ ಸರ್ಕಾರದ ಸುತ್ತೋಲೆ ದಿನಾಂಕ 18.02.2022 ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅನುಸರಿಸತಕ್ಕದ್ದು ಹಾಗೂ ಜಮೀನು ಹೊಂದಿರುವ ಬಗ್ಗೆ ಜಮೀನಿನ ಕುರಿತು ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೋರೇಷನ್ ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು ಅಥವಾ ಸದರಿ ಜಮೀನನ್ನು ಸಂಸ್ಥೆಯು/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೊಂದಾಯಿತವಾಗಿರುವ (ಎ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರದ ನಕಲು ಪ್ರತಿಗಳನ್ನು ಸಲ್ಲಿಸತಕ್ಕದ್ದು.
12. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಹಾಗೂ ಸರ್ಕಾರದ ಮಾರ್ಗಸೂಚಿಯಂತೆ ಖಾಸಗಿ/ಸರ್ಕಾರಿ ಕಟ್ಟಡಗಳು ಸಧೃಡತೆ/ಸುರಕ್ಷತೆ ಕುರಿತು National Building Code-2016 ರ ನಿಯಮಾನುಸಾರ ಲೋಕೋಪಯೋಗಿ ಇಲಾಖೆಯಿಂದ ಪಡೆದ ಪ್ರಮಾಣಪತ್ರ ಹಾಗೂ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯಿಂದ (Compliance Certificate) ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
13. ಕಾಲೇಜುಗಳು ಆನ್‌ಲೈನ್ ಪೋರ್ಟಲ್‌ನಲ್ಲಿ ಸರ್ಕಾರ ನಿಗದಿಪಡಿಸಿರುವ ಈ ಕೆಳಕಂಡ ಎಂಟು ಮಾನದಂಡಗಳನ್ನು ಪೂರ್ಣಗೊಳಿಸುವುದು ಕಡ್ಡಾಯವಾಗಿರುತ್ತದೆ.

| Sl. No. | Parameter | Minimum Value/Quantity required as per UGC/KSU Act |
|---|---|---|
| 1. | Land Available (Including builtup area) in acre | a) Not less than 0.5 acres, if it is located in the mega cities<br>b) 1 acre, if it is located in BMRDA, City Corporation and district headquarters<br>c) 1.5 acres, if it is located in Municipalities or taluk head quarters.<br>d) 3 acres, if it is any other rural areas. |
| 2. | Class room area per student, in sq. ft | 15 sq. ft per student |
| 3. | Laboratory area per student, in sq. ft | 10 sq. ft per student |
| 4. | Library area per student, in sq. ft | 7.5 sq. ft per student |
| 5. | Book Bank for SC/ST students | Should be available |
| 6. | Sufficient number of books, as per UGC guidelines | At least 1000 books/100 books in different titles on each subject, whichever is more |
| 7. | Corpus fund , as per UGC regulations | Should be maintained |
| 8. | Execution of bond as per UGC regulations | Should be executed |

14. ಒಂದು ಬಾರಿ ಅರ್ಜಿ ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ಮೇಲ್ಕಂಡ ಲಿಂಕನ್ನು ಅನ್‌ಲಾಕ್ ಮಾಡಲಾಗುವುದಿಲ್ಲ. ಆದುದರಿಂದ, ಕಾಲೇಜಿನ ಸಂಪೂರ್ಣ ವಿವರಗಳನ್ನು ಸರಿಯಾಗಿ ಪರಿಶೀಲಿಸಿದ ನಂತರವೇ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸತಕ್ಕದ್ದು (Final submission).

ಆದೇಶದ ಮೇರೆಗೆ,

ಕುಲಸಚಿವರು

ರಿಗೆ:

1. ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಹೆಚ್ಚುವರಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ರಿಸರ್ಚ್ ಮತ್ತು ಟ್ರೈನಿಂಗ್), ಬೆಂಗಳೂರು
4. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು
5. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಹಂಪನಕಟ್ಟೆ, ಮಂಗಳೂರು -01
6. ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರು/ ಉಪಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ
7. ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ
8. ನಿರ್ದೇಶಕರು, DUIMS ಮಂಗಳೂರು ವಿಶ್ವವಿದ್ಯಾನಿಲಯ – ಸದ್ರಿ ಅಧಿಸೂಚನೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.